# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


MESCOM

ಮುಖ್ಯ ಇಂಜಿನಿಯರ್ (ವಿದ್ಯುತ್) ರವರ ಕಛೇರಿ, ದೂರವಾಣಿ: 0824-2425153, 2425888
ಮಂಗಳೂರು ವಲಯ, ಫ್ಯಾಕ್ಸ್ : 0824-2425570
ಪ್ಯಾರಾಡೈಮ್ ಪ್ಲಾಜಾ, ಎ.ಬಿ ಶೆಟ್ಟಿ ವೃತ್ತ, ಇ-ಮೇಲ್:ceemescom@rediffmail.com
ಪಾಂಡೇಶ್ವರ, ಮಂಗಳೂರು-575001.


ಸಂಖ್ಯೆ:ಮುಇಂ/ಮಂವ/ನಿ/ಕ್ರೀಡೆ/19-20/ 2424 ದಿನಾಂಕ: 13 JAN 2020

## ಸುತ್ತೋಲೆ

| | | |
|---|---|---|
| ವಿಷಯ | : | 2019-20ನೇ ಸಾಲಿನ ಕ್ರೀಡಾ ಚಟುವಟಿಕೆಗಳ ಬಗ್ಗೆ. |
| ಉಲ್ಲೇಖ | : | ದಿನಾಂಕ:27.06.2019 ರಂದು ಬೆಂಗಳೂರಿನಲ್ಲಿ ನಡೆದ ಕೇಂದ್ರ ಕ್ರೀಡಾ ಸಮಿತಿ ಸಭೆಯ ನಡಾವಳಿ ಸಂಖ್ಯೆ:ಕವಿಪ್ರನಿನಿ/ಬಿ67/ 89930/20-19-20 ದಿನಾಂಕ:16.07.2019. |

*****

2019-20 ನೇ ಸಾಲಿನಲ್ಲಿ ನಡೆಸುವ ಕೀಡಾ ಚಟುವಟಿಕೆಗಳ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅಂತರ್ ವಿದ್ಯುತ್ ಕಂಪೆನಿ ಕ್ರೀಡಾ ಚಟುವಟಿಕೆಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿ ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಕ್ರೀಡಾ ಸಂಸ್ಥೆ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರುರವರು ತಿಳಿಸಿರುತ್ತಾರೆ. ಈ ಬಗ್ಗೆ ದಿನಾಂಕ:09.01.2020 ರಂದು ನಡೆದ ಮ.ವಿ.ಸ.ಕಂ., ಕ್ರೀಡಾ ಸಮಿತಿಯ ಸಭೆಯಲ್ಲಿ ನಿರ್ಣಯಿಸಿರುವಂತೆ ವಲಯ / ಕಂಪೆನಿ ಮಟ್ಟದ ಆಯ್ಕೆ ಪ್ರಕಿಯೆಯನ್ನು ಕೆಳಕಂಡಂತೆ ಪೂರ್ಣಗೊಳಿಸಲು ಮಂಗಳೂರು ಮತ್ತು ಚಿಕ್ಕಮಗಳೂರು ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದೆ.

1. **ಶಿವಮೊಗ್ಗ ಮತ್ತು ಚಿಕ್ಕಮಗಳೂರು ವೃತ್ತಗಳು ಸೇರಿ ಚಿಕ್ಕಮಗಳೂರು ಇಲ್ಲಿ ಶಿವಮೊಗ್ಗ ವಲಯ ಮಟ್ಟದ ಆಯ್ಕೆ ಪ್ರಕ್ರಿಯೆ : 23.01.2020 ರೊಳಗಾಗಿ**
2. **ಮಂಗಳೂರು ಮತ್ತು ಉಡುಪಿ ವೃತ್ತಗಳು ಸೇರಿ ಎನ್.ಐ.ಟಿ.ಕೆ ಮಂಗಳೂರು ಇಲ್ಲಿ ಮಂಗಳೂರು ವಲಯ ಮಟ್ಟದ ಆಯ್ಕೆ ಪ್ರಕ್ರಿಯೆ : 23.01.2020.**
3. **ಎನ್.ಐ.ಟಿ.ಕೆ ಮಂಗಳೂರು ಇಲ್ಲಿ ಕಂಪೆನಿಮಟ್ಟದ ಆಯ್ಕೆ ಪ್ರಕ್ರಿಯೆ : 24.01.2020**

<u>ಆಯ್ಕೆ ಪ್ರಕ್ರಿಯೆ ನಡೆಸಬೇಕಾದ ಕ್ರೀಡೆಗಳು ಮತ್ತು ಪ್ರತಿ ಕ್ರೀಡೆಯಲ್ಲಿ ಆಯ್ಕೆ ಮಾಡಬೇಕಾದ ಕ್ರೀಡಾಪಟುಗಳ ವಿವರ ಕೆಳಕಂಡಂತಿವೆ;</u>

| ಪುರುಷರು | | | ಮಹಿಳೆಯರು | | |
|---|---|---|---|---|---|
| ಕ್ರ. ಸಂ | ಕ್ರೀಡೆಗಳು | ಕ್ರೀಡಾಪಟುಗಳು | ಕ್ರ. ಸಂ | ಕ್ರೀಡೆಗಳು | ಕ್ರೀಡಾಪಟುಗಳು |
| 1 | ಅಥ್ಲೆಟಿಕ್ಸ್ (100 ಮೀ. 200 ಮೀ. 800 ಮೀ. 1,500 ಮೀ. 5,000 ಮೀ. 10,000 ಮೀ. 4*100 ಮೀ ರಿಲೆ, 4*400 ಮೀ ರಿಲೆ, ಬ್ರಾಡ್‌ಜಂಪ್, ಟ್ರಿಪಲ್ ಜಂಪ್, ಹೈ ಜಂಪ್, ಶಾಟ್‌ಪುಟ್, ಡಿಸ್ಕಸ್ ಥ್ರೋ, ಹ್ಯಾಮರ್ ತ್ರೋ, ಜಾವಲಿನ್ ಥ್ರೋ) | ಪ್ರತಿ ಕ್ರೀಡೆಗೆ 2 ಕ್ರೀಡಾಪಟುಗಳನ್ನು ಹಾಗೂ ಪ್ರತಿ ರಿಲೆ ಕ್ರೀಡೆಗೆ 4 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು | 1 | ಅಥ್ಲೆಟಿಕ್ಸ್ (100 ಮೀ, 200 ಮೀ, 4*100 ಮೀ ರಿಲೆ, ಬ್ರಾಡ್‌ಜಂಪ್, ಶಾಟ್‌ಪುಟ್) | ಪ್ರತಿ ಕ್ರೀಡೆಗೆ 2 ಕ್ರೀಡಾಪಟುಗಳನ್ನು ಹಾಗೂ ಪ್ರತಿ ರಿಲೆ ಕ್ರೀಡೆಗೆ 4 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು |
| 2 | ಬಾಲ್‌ಬ್ಯಾಡ್ಮಿಂಟನ್ | 10 | 2 | ಬಾಲ್‌ಬ್ಯಾಡ್ಮಿಂಟನ್ | 3 |
| 3 | ಬಾಸ್ಕೆಟ್‌ಬಾಲ್ | 10 | 3 | ಕೇರಂ | 4 |
| 4 | ಬಿಲಿಯರ್ಡ್ಸ್ / ಸ್ನೂಕರ್ | 2 | 4 | ಚೆಸ್ | 3 |
| 5 | ದೇಹದಾಢ್ಯ | 8 | 5 | ಷಟಲ್ ಬ್ಯಾಡ್ಮಿಂಟನ್ | 4 |
| 6 | ಕೇರಂ | 4 | 6 | ಟೇಬಲ್ ಟೆನ್ನಿಸ್ | 4 |
| 7 | ಚೆಸ್ | 3 | 7 | ಥ್ರೋಬಾಲ್ | 10 |
| 8 | ಕ್ರಿಕೆಟ್ | 15 | 8 | ಟೆನ್ನಿಕಾಯಿಟ್ | 3 |
| 9 | ಫುಟ್‌ಬಾಲ್ | 15 | 9 | ಯೋಗ | 4 |

| | | |
|---|---|---|
| 10 | ಹಾಕಿ | 15 |
| 11 | ಕಬಡ್ಡಿ | 12 |
| 12 | ಖೋ-ಖೋ | 12 |
| 13 | ಲಾನ್ ಟೆನ್ನಿಸ್ | 4 |
| 14 | ಪವರ್‌ಲಿಫ್ಟಿಂಗ್ | 8 |
| 15 | ಷಟಲ್ ಬ್ಯಾಡ್ಮಿಂಟನ್ | 5 |
| 16 | ಸ್ವಿಮ್ಮಿಂಗ್ (50 ಮೀ ಫ್ರೀಸ್ಟೈಲ್, 50 ಮೀ ಬ್ಯಾಕ್‌ಸ್ಟ್ರೋಕ್, 50 ಮೀ ಬ್ರೆಸ್ಟ್ ಸ್ಟ್ರೋಕ್, 100 ಮೀ ಫ್ರೀಸ್ಟೈಲ್) | ಪ್ರತಿ ಕ್ರೀಡೆಗೆ 2 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು |
| 17 | ಟೇಬಲ್ ಟೆನ್ನಿಸ್ | 4 |
| 18 | ವಾಲಿಬಾಲ್ | 12 |
| 19 | ಯೋಗ | 4 |

2019-20 ನೇ ಸಾಲಿನ ಕ್ರೀಡಾ ಚಟುವಟಿಕೆಗಳ ಬಗ್ಗೆ ಪೂರಕವಾಗಿ ನಡೆಯುವ ಕಂಪೆನಿ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈಗಾಗಲೇ ಚಾಲನೆಯಲ್ಲಿರುವಂತೆ, ಮ.ವಿ.ಸ.ಕಂ., / ಕ.ವಿ.ಪ್ರ.ನಿ.ನಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು / ನೌಕರರು ಕಂಪೆನಿಯ ಭೌಗೋಳಿಕ ವ್ಯಾಪ್ತಿಗೆ (Company Geographical Jurisdiction) ಬರುವ ವಿದ್ಯುತ್ ಸರಬರಾಜು ಕಂಪೆನಿಯ ಕ್ರೀಡಾ ತಂಡಗಳನ್ನು ಪ್ರತಿನಿಧಿಸಿ ಕ್ರೀಡಾಕೂಟಗಳಲ್ಲಿ ಭಾಗವಹಿಸಬಹುದಾಗಿದೆ.

ಆಸಕ್ತಿಯುಳ್ಳ ಕ್ರೀಡಾಪಟುಗಳು ಕಂಪೆನಿಯ ಕ್ರೀಡಾ ಕಾರ್ಯದರ್ಶಿ / ಸಂಚಾಲಕರನ್ನು ಸಂಪರ್ಕಿಸಿ ಸರಿಯಾದ ಮಾಹಿತಿಯನ್ನು ಪಡೆದು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ವಲಯ / ಕಂಪೆನಿ ಮಟ್ಟದಲ್ಲಿ ಆಯ್ಕೆಯಾಗಿ ಅಂತರ್ ವಿದ್ಯುತ್ ಕಂಪೆನಿ ಕ್ರೀಡಾಕೂಟದಲ್ಲಿ ಭಾಗವಹಿಸಿ, ಅಖಿಲ ಭಾರತ ಅಂತರ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಗಳ ಕ್ರೀಡಾಕೂಟ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಅರ್ಹತೆ ಪಡೆಯುವುದು.

ಕಂಪೆನಿಯ ಭೌಗೋಳಿಕ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುತ್ತಿರುವ ಮ.ವಿ.ಸ.ಕಂ., / ಕ.ವಿ.ಪ್ರ.ನಿ.ನಿ ಯ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂಬ ದೃಷ್ಟಿಯಿಂದ ಈ ವಿಷಯವನ್ನು ಎಲ್ಲಾ ಕ್ರೀಡಾಪಟುಗಳ ಗಮನಕ್ಕೆ ತರಲು ತಿಳಿಸಿದೆ.

**ಮುಖ್ಯ ಇಂಜಿನಿಯರ್(ವಿದ್ಯುತ್),**
**ಮ.ವಿ.ಸ.ಕಂ., ಮಂಗಳೂರು ವಲಯ ಹಾಗೂ**
**ಅಧ್ಯಕ್ಷರು, ಮ.ವಿ.ಸ.ಕಂ., ಕ್ರೀಡಾ ಸಮಿತಿ, ಮಂಗಳೂರು.**

**ಪ್ರತಿಗಳು:**

1. ನಿರ್ದೇಶಕರು (ಪ್ರಸರಣ) ಮತ್ತು ಅಧ್ಯಕ್ಷರು ಕವಿಪ್ರನಿನಿ ಕ್ರೀಡಾ ಸಂಸ್ಥೆ, ಕಾವೇರಿ ಭವನ, ಬೆಂಗಳೂರು-9.
2. ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.) ಮತ್ತು ಹಿರಿಯ ಉಪಾಧ್ಯಕ್ಷರು, ಕವಿಪ್ರನಿನಿ ಕ್ರೀಡಾ ಸಂಸ್ಥೆ, ಕಾವೇರಿ ಭವನ, ಬೆಂಗಳೂರು-9.
3. ಮುಖ್ಯ ಇಂಜಿನಿಯರ್(ವಿದ್ಯುತ್), ಮ.ವಿ.ಸ.ಕಂ, ಕಾ ಮತ್ತು ಪಾ ವಲಯ, ಶಿವಮೊಗ್ಗ ರವರ ಗಮನಕ್ಕೆ ಕಳುಹಿಸಿದೆ.
4. ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.ಅ), ಮ.ವಿ.ಸ.ಕಂ, ಮಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ ಕ್ರೀಡಾ ಸಂಸ್ಥೆ, ಕಾವೇರಿ ಭವನ, ಬೆಂಗಳೂರು-9
6. ಅಧೀಕ್ಷಕ ಇಂಜಿನಿಯರ್(ವಿ), ಮ.ವಿ.ಸ.ಕಂ, ಕಾರ್ಯ ಮತ್ತು ಪಾಲನಾ ವೃತ್ತ, ಮಂಗಳೂರು / ಉಡುಪಿ / ಶಿವಮೊಗ್ಗ / ಚಿಕ್ಕಮಗಳೂರು ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
7. ಅಧೀಕ್ಷಕ ಇಂಜಿನಿಯರ್(ವಿ), ಕವಿಪ್ರನಿನಿ, ಪ್ರಸರಣ (ಕಾ ಮತ್ತು ನಿ) ವೃತ್ತ, ಮಂಗಳೂರು / ಶಿವಮೊಗ್ಗ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮ.ವಿ.ಸ.ಕಂ, ಕಾ ಮತ್ತು ಪಾ ವಿಭಾಗ, ಮಂಗಳೂರು ವಲಯ.
9. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕವಿಪ್ರನಿನಿ, ಬೃ.ಕಾ ವಿಭಾಗ, ಮಂಗಳೂರು / ಉಡುಪಿ / ಶಿವಮೊಗ್ಗ.
10. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕವಿಪ್ರನಿನಿ, ಟಿ.ಎಲ್ ಅಂಡ್ ಎಸ್.ಎಸ್ ವಿಭಾಗ, ಕೇಮಾರ್-ಕಾರ್ಕಳ / ಶಿವಮೊಗ್ಗ / ಎಸ್.ಆರ್.ಎಸ್, ಕಾವೂರು, ಮಂಗಳೂರು / ಎಂ.ಆರ್.ಎಸ್, ಶಿವಮೊಗ್ಗ.
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮ.ವಿ.ಸ.ಕಂ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಮಂಗಳೂರು ವಲಯ ರವರ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕಕ್ಕಾಗಿ.
12. ವಲಯ ಕ್ರೀಡಾ ಸಮಿತಿಯ ಎಲ್ಲಾ ಸದಸ್ಯರುಗಳಿಗೆ.
13. ಆಪ್ತ ಕಾರ್ಯದರ್ಶಿ - ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ತಾಂತ್ರಿಕ) / ಮುಖ್ಯ ಆರ್ಥಿಕ ಅಧಿಕಾರಿ / ಆರ್ಥಿಕ ಸಲಹೆಗಾರರು (ಆಂ.ಪ), ಮ.ವಿ.ಸ.ಕಂ., ಮಂಗಳೂರು ರವರ ಮಾಹಿತಿಗಾಗಿ.